# ಕಡ್ಲಿ ಗಿಡ

■ ಚಿತ್ರ– ಲೇಖನ:
**ಸೀತಾ ಎಸ್. ನಾರಾಯಣ**





**ಸಾ**ಮಾನ್ಯವಾಗಿ ತೆಂಗಿನಕಡ್ಡಿಗಳ ಪೊರಕೆಗಳ ಉಪಯೋಗ ಎಲ್ಲರಿಗೂ ತಿಳಿದಿದೆ. ಆದರೆ 'ಕಡ್ಲಿ ಗಿಡ' ಎಂಬ ಈ ಸಸ್ಯದ ಪೊರಕೆಯು ನಾರಿನಂಶವಿರುವುದರಿಂದ ತೆಂಗಿನ ಪೊರಕೆಗಳಿಗಿಂತ ಹೆಚ್ಚು ಬಾಳಿಕೆ ಬರುತ್ತದೆ. ಇದರಿಂದ ಮನೆಯ ಅಂಗಳ, ಕೊಟ್ಟಿಗೆ, ಕಣಗಳ ಕಸ ಗುಡಿಸಲು, ಬಚ್ಚಲು, ತೊಟ್ಟಿ ತೊಳೆಯಲು ಬಹಳ ಅನುಕೂಲವಾಗಿದೆ. ಮುಂಭಾಗ ಹರಡಿಕೊಂಡಿರುವುದರಿಂದ ಬಹಳ ಬೇಗ ಸ್ವಚ್ಛವಾಗುತ್ತದೆ.

ಬಿತ್ತಿ ಬೆಳೆಯದಿದ್ದರೂ ಮಳೆಗಾಲ ಪ್ರಾರಂಭವಾಗುತ್ತಿದ್ದಂತೆಯೇ ಸಹಜವಾಗಿ ಎಲ್ಲೆಂದರಲ್ಲಿ ಅಪಾರವಾಗಿ ಹುಟ್ಟುವ ಈ ಸಸ್ಯವು 'ಮಾಲವ' ಜಾತಿಗೆ ಸೇರಿದ್ದೆನ್ನಲಾಗಿದೆ. ಸುಮಾರು ಮೂರೂವರೆ ಅಡಿವರೆಗೆ ಎತ್ತರ ಬೆಳೆದು ಪೊದೆಯಂತೆ ಹರಡಿಕೊಳ್ಳುವ ಈ ಸಸ್ಯವನ್ನು ಸ್ಥಳೀಯವಾಗಿ ಕಡ್ಲಿ ಗಿಡ, ಕಾರ್‌ಕಡ್ಲಿ ಗಿಡ, ಬರಲು (ಪೊರಕೆ) ಗಿಡ, ಭೀಮನಕಡ್ಡಿ ಎಂದೆಲ್ಲಾ ಕರೆಯುತ್ತಾರೆ. ಉದ್ದವಾದ ಗರಗಸದಂತಹ ಅಂಚಿನ ಎಲೆಗಳನ್ನು ಹೊಂದಿರುವ ಈ ಗಿಡದಲ್ಲಿ ಎಲೆಗೊಂದರಂತೆ ಸುಂದರವಾದ ಪುಟ್ಟ ಪುಟ್ಟ ತಿಳಿ ಹಳದಿ ಹೂಗಳು ಬಿಟ್ಟಿರುತ್ತವೆ. ಕಡ್ಲೆಯಂತೆ ಕಾಯಾಗುವುದರಿಂದಲೋ ಏನೋ 'ಕಡ್ಲಿ ಗಿಡ' ಎಂಬ ಹೆಸರು ಬಂದಿದೆ. ಮಳೆಗಾಲ ಮುಗಿಯುವ ಹೊತ್ತಿಗೆ ಸಂಪೂರ್ಣವಾಗಿ ಬೆಳೆದು ನಿಲ್ಲುತ್ತದೆ.

ಕಡ್ಲಿ ಗಿಡದ ಕಾಂಡ, ಕಡ್ಡಿಗಳು ಬಹಳ ಗಟ್ಟಿಯಾಗಿರುತ್ತವೆ, ಬೇರು ಸಹ ಗಟ್ಟಿಯಾಗಿರುವುದರಿಂದ ಬರಿ ಕೈಯಲ್ಲಿ ಗಿಡವನ್ನು ಕೀಳುವುದು ಕಷ್ಟ. ಗಿಡ ಹಸಿ ಇರುವಾಗಲೇ ಕುಡುಗೋಲಿನಿಂದ ಕತ್ತರಿಸಿ 'ಬರಲು' ಕಟ್ಟಿ ಇಟ್ಟರೆ, ಎಲೆಗಳು ಒಣಗಿ ಉದುರಿದ ಮೇಲೆ ಬಳಸಬಹುದು. ಈ ಸಸ್ಯವು ಔಷಧೀಯ ಗುಣವನ್ನೂ ಹೊಂದಿದ್ದು, ಹೊಟ್ಟೆನೋವು, ಅತಿಸಾರದಲ್ಲಿ ಔಷಧವಾಗಿ ಬಳಸಲ್ಪಡುತ್ತದೆ.